**BKN-01**

**ಪ್ರಥಮ ಬಿ.ಎ./ಬಿ.ಕಾಂ ತೆರೆದ ಪುಸ್ತಕ ಪರೀಕ್ಷೆ ಜನವರಿ – 2021**

**(ಹೊಸ ಪಠ್ಯಕ್ರಮ – SLM Scheme)**

**ಕನ್ನಡ ಭಾಷೆ : ಪತ್ರಿಕೆ – ೧**

**ಸವಿಸ್ತರ ಮತ್ತು ಅವಿಸ್ತರ ಪಠ್ಯಗಳು**

**(ಹೊಸಗನ್ನಡ ಕವಿತೆಗಳು, ಏಕಾಂಕ ನಾಟಕಗಳು, ಪ್ರಬಂಧ ಮತ್ತು ಆಡಳಿತ ಕನ್ನಡ)**

**ಸಮಯ :** **ಗರಿಷ್ಠಾಂಕ : 80**

**ಸೂಚನೆ : ಎಲ್ಲಾ ಪ್ರಧಾನ ಪ್ರಶ್ನೆಗಳು ಕಡ್ಡಾಯ**

**ಎ – ವಿಭಾಗ**

**(ಹೊಸಗನ್ನಡ ಕವಿತೆಗಳು, ಏಕಾಂಕ ನಾಟಕಗಳು : 20 ಅಂಕಗಳು)**

1. ಎರಡರ ಭಾವವನ್ನು ಸಂದರ್ಭಸಹಿತ ವಿವರಿಸಿ : **2 x 4 = 8**

1.1 ಜವರಾಯ ನುಂಗಿದೀ
ಹೆಣ್ಣು ಮಗುವಿನಲಿ
ಹೊರೆದ ಕಲ್ಮಷ ತೊಳೆದು,
ಈಗ ತಾನುಳಿದಿಹುದು,
ಚೆಲುವಾದ, ನಿರ್ಮಲದ
ಹೆಣ್ಣು ತನವೊಂದು!

ಅಥವಾ

ಬುದ್ಧ–ಬಸವ–ಗಾಂಧಿ ಬಂದದ್ದು ಆಯಿತು
ಇವರ ನೋವಿಗೆ ಆದಿ ಅಂತ್ಯವೇ ಇಲ್ಲಾ
ನೋವಿನೆದೆ ಮೂಡುವಲ್ಲಿ ಮುತ್ತುರತ್ನವ ಬೆಳೆದು
ಒಮ್ಮೆಯೂ ಕಂಡಿಲ್ಲ ಬದುಕಲ್ಲಿ ಬೆಲ್ಲ.

1.2 ಏನ ಮಾತಾಡ್ತೀರಾ ಶೆಟ್ರೇ? ದೇವರ ಮನೇನಾ? ದೇವ್ರಿಗೂ ಮನೆ ಬೇಕಾ? ಇಷ್ಟು ದಿನಗಳಾದ್ರೂ, ಅವನು ಹುಟ್ಟಿ ಇನ್ನೂ ಒಂದು ಮನೇನು ಕಟ್ಟಿಕೊಂಡಿಲ್ಲವಾ? ಅಯ್ಯೋ ಪಾಪ ! ನೀವು ಅವನಿಗಾಗಿ ಮನೆ ಕಟ್ಸಿ ಕೊಡುತ್ತೀರಾ? ಎಂಥ ಕಾಲ ಬಂತು ಶೆಟ್ರೇ.....

ಅಥವಾ

ಸಾಲಿ ಬಿಡಸೇ ಬಿಡ್ತಾನಂತ
ಮಡಸಾ, ಹಳೆ ಮಡಸಾ
ಎಷ್ಟ ಕ್ವಾಣ್ಯಾ ಅದಾನಂದೀ
ನನ್ನ ಕುಮಾರ!

2. **ಎಂಟು** ಪದಗಳಿಗೆ ಅರ್ಥ ಬರೆಯಿರಿ : **8 x ½= 4**

ತಿಮಿರ, ಖತಿ, ನಭ, ಹದುಳ, ಬಿಕ್ಕೆ, ಡೌಲು, ನೆಪ್ಪಿ, ಪಗಡಿ, ಖೂನಿ, ಗಿಲೀಟು, ಗಾವಿಳ, ದಾವಾನಲ.

3. ಯಾವ ಪಠ್ಯವನ್ನು ಬಿಡದೆ **ನಾಲ್ಕಕ್ಕೆ** ಸಂದರ್ಭ ಸ್ವಾರಸ್ಯ ವಿವರಿಸಿ : **4 x 2 = 8**

3.1 ತೊಲಗಿತು ನಿನ್ನೆಯ ನಾಯ್‌ಪಾಡು!

3.2 ಕಾಣದೇನೋ ದಾರಿಹೋಕನೆ!

3.3 ಬಿತ್ತಕ್ಕೆ ಬೇರಿನ ಚಿಂತೆ ಇಲ್ಲ

3.4 ಅನ್ನ ದೊರೆತಲ್ಲಿ ನಮ್ಮ ಛತ್ರ

3.5 ಒಳ್ಳೆ ಹಂದಿ ಸಾವಾಸ ಆತು ಕಣೋ

3.6 ಮಡದಿಯಿಲ್ಲದ ಮನೆ ಮಸಕಾದಂತೆ.

## ಬಿ– ವಿಭಾಗ

**(ಹೊಸಗನ್ನಡ ಕವಿತೆಗಳು, ಏಕಾಂಕ ನಾಟಕಗಳು : 30 ಅಂಕಗಳು)**

4. **ಎರಡು** ಪ್ರಶ್ನೆಗಳಿಗೆ ಉತ್ತರಿಸಿ: **2 x 10 = 20**

4.1 'ಹುತ್ತರಿ ಹಾಡು'ವಿನಲ್ಲಿ ವರ್ಣಿಸಲ್ಪಟ್ಟಿರುವ ಕೊಡವರ ಸಾಹಸ ಸ್ವಭಾವಗಳನ್ನು ವಿವರಿಸಿ.

ಅಥವಾ

ಶೋಷಣೆಯ ವಿಭಿನ್ನ ಮುಖಗಳು 'ನನ್ನ ಜನಗಳು' ಕವಿತೆಯಲ್ಲಿ ಹೇಗೆ ವ್ಯಕ್ತಗೊಂಡಿದೆ? ನಿರೂಪಿಸಿ.

4.2 ವ್ಯಕ್ತಿ ತನ್ನ ಮಹಾತ್ವಾಕಾಂಕ್ಷೆ ಈಡೇರಿಸಿಕೊಳ್ಳಲು ತನ್ನ ಕೃತ್ಯಗಳನ್ನು ಸಮರ್ಥಿಸಿಕೊಂಡ ಬಗೆ 'ತೆರೆಗಳು' ನಾಟಕದಲ್ಲಿ ಹೇಗೆ ನಿರೂಪಿತವಾಗಿದೆ.

ಅಥವಾ

'ಹರಿಜನ್ವಾರ' ನಾಟಕದಲ್ಲಿನ ಬದಲಾವಣೆ, ಪ್ರಗತಿ ಮತ್ತು ಸ್ವಾತಂತ್ರ್ಯದ ಸಂಕೇತ ಕೆಂಪು – ವಿಚಾರಮಾಡಿ.

**5.** **<u>ಎರಡನ್ನು</u>** ಕುರಿತು ಟಿಪ್ಪಣಿ ಬರೆಯಿರಿ : **2 x 5 = 10**

5.1 ತುಂಗಭದ್ರೆಯ ಬಾಲಲೀಲೆಗಳು

ಅಥವಾ

'ವರ್ಧಮಾನ' ಕವಿತೆಯ ಆಶಯ

5.2 ಉಳ್ಳಾಗಡ್ಡಿ ಪ್ರಸಂಗದ ಹಿರಿಮೆ

ಅಥವಾ

ಚಂದ್ರಕಾಂತ ಕುಸನೂರ.

**ಸಿ – ವಿಭಾಗ**

**(ಪ್ರಬಂಧ ಮತ್ತು ಆಡಳಿತ ಕನ್ನಡ : 30 ಅಂಕಗಳು)**

**6.** **ಎರಡು** ಪ್ರಶ್ನೆಗಳಿಗೆ ಉತ್ತರಿಸಿ : **2 x 10 = 20**

6.1 ದಿವಾನಖಾನೆಯ ಅಂದಚೆಂದಕ್ಕೆ ಕಾರಣವಾದ ಅಂಗಗಳನ್ನು ವಿವರಿಸಿ.

ಅಥವಾ

'ನಮ್ಮಂತೆಯೇ ಅಮೇರಿಕನ್ನರು; ಅಮೇರಿಕನ್ನರಂತೆ ನಾವು' ಎಂಬ ಲೇಖಕರ ಅಭಿಪ್ರಾಯವನ್ನು ಚರ್ಚಿಸಿ.

6.2 ಆಡಳಿತ ಕನ್ನಡದ ಸ್ವರೂಪ, ಲಕ್ಷಣ ಹಾಗೂ ಬೆಳೆದು ಬಂದ ಬಗೆಯನ್ನು ವಿವರಿಸಿ.

ಅಥವಾ

ಅರ್ಜಿ ಎಂದರೇನು? ಅರ್ಜಿಯ ವಿಧಗಳಾವುವು? ಸೂಕ್ತ ಮಾದರಿಗಳೊಂದಿಗೆ ವಿವರಿಸಿ.

**7.** **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ **2 x 5 = 10**

7.1 ಗಾಂಧೀಜಿಯವರ ನಿದ್ರಾ ಪ್ರಸಂಗ

ಅಥವಾ

"ರುಚಿ" ಪ್ರಬಂಧದ ಆಶಯ

7.2 ಸುತ್ತೋಲೆ

ಅಥವಾ

ಕನ್ನಡ ಮತ್ತು ಇ–ಅಂಚೆ.

*************

**ಪ್ರಥಮ ಬಿ.ಎ. ತೆರೆದ ಪುಸ್ತಕ ಪರೀಕ್ಷೆ ಜನವರಿ – 2021**

**(ಹೊಸ ಪಠ್ಯಕ್ರಮ – SLM Scheme)**

**ಐಚ್ಛಿಕ ಕನ್ನಡ : ಪತ್ರಿಕೆ – ೧**

**ಕನ್ನಡ ಸಾಹಿತ್ಯ ಚರಿತ್ರೆ**

**ಸಮಯ :** **ಗರಿಷ್ಠಾಂಕ : 80**

**ಸೂಚನೆ : ಎಲ್ಲಾ ಪ್ರಧಾನ ಪ್ರಶ್ನೆಗಳು ಕಡ್ಡಾಯ**

**ಎ – ವಿಭಾಗ (20 ಅಂಕಗಳು)**

1. ಇವುಗಳಲ್ಲಿ **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ : **4 x 5 = 20**
   1. ಹಲ್ಮಿಡಿ ಶಾಸನ
   2. ಸಿದ್ಧರಾಮ
   3. ಷಡಕ್ಷರಿ
   4. ಸರ್ವಜ್ಞ
   5. ಮುದ್ರಾಮಂಜೂಷ
   6. ನವ್ಯ ಸಾಹಿತ್ಯ

**ಬಿ – ವಿಭಾಗ (30 ಅಂಕಗಳು)**

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** **3 x 10 = 30**

2. ರತ್ನಾತ್ರಯರು ಯಾರು? ಇವರಲ್ಲಿ ಒಬ್ಬರ ಸಾಹಿತ್ಯಿಕ ಸಾಧನೆಯನ್ನು ಪರಿಚಯಿಸಿ.

   ಅಥವಾ

   ಕನ್ನಡ ಚಂಪೂ ಕಾವ್ಯಗಳ ಸ್ವರೂಪ ಮತ್ತು ಲಕ್ಷಣಗಳನ್ನು ವಿವರಿಸಿ.

3. ಅಕ್ಕಮಹಾದೇವಿ ಅವರ ಕಾಲ, ದೇಶ ಮತ್ತು ವಚನಗಳ ಮಹತ್ವವನ್ನು ವಿವರಿಸಿ.

   ಅಥವಾ

   ಕನ್ನಡ ಸಾಹಿತ್ಯದಲ್ಲಿ ಹರಿಹರ ಮತ್ತು ರಾಘವಾಂಕರ ಸ್ಥಾನವೇನು? ನಿರ್ಧರಿಸಿ.

4. ನವೋದಯ ಸಾಹಿತ್ಯಕ್ಕೆ ಪ್ರೇರಣೆ ಮತ್ತು ಪ್ರಭಾವವನ್ನು ವಿಶದಪಡಿಸಿ.

   ಅಥವಾ

   ದಲಿತ–ಬಂಡಾಯ ಸಾಹಿತ್ಯದ ಸ್ವರೂಪವನ್ನು ವಿವರಿಸಿ.

## ಸಿ – ವಿಭಾಗ (30 ಅಂಕಗಳು)

**ಒಂದು** ಪ್ರಶ್ನೆಗೆ ಉತ್ತರಿಸಿ : **1x15 = 15**

5. ದಾಸ ಸಾಹಿತ್ಯದ ವಿಶಿಷ್ಟತೆಯನ್ನು ಬರೆಯಿರಿ ಮತ್ತು ಇಬ್ಬರು ಪ್ರಮುಖ ಕೀರ್ತನಕಾರರನ್ನು ಪರಿಚಯಿಸಿ.
6. ಪ್ರಗತಿಶೀಲ ಸಾಹಿತ್ಯ ಎಂದರೇನು? ವಿವರಿಸಿ. ಅ.ನ.ಕೃ. ಮತ್ತು ನಿರಂಜನರ ಕೊಡುಗೆಯನ್ನು ಚರ್ಚಿಸಿ.

**ಒಂದು** ಪ್ರಶ್ನೆಗೆ ಉತ್ತರಿಸಿ : **1 x15 = 15**

7. ಕನ್ನಡ ಸಾಹಿತ್ಯಕ್ಕೆ ಕುಮಾರವ್ಯಾಸನ ಕೊಡುಗೆಯನ್ನು ನಿರೂಪಿಸಿ.
8. ಮಹಿಳಾ ಸಾಹಿತ್ಯದ ಉಗಮ ಮತ್ತು ವಿಕಾಸವನ್ನು ವಿವರಿಸಿ.

***********